# ಎಮ್ಮ ನುಡಿಗೇಳ್ (೧೦ ನೇ ತರಗತಿ ಪ್ರಥಮಭಾಷೆ ಕನ್ನಡ ಪದ್ಯಪಾಠ)
# - (ಆದಿ ಕವಿ ಪಂಪ)
# ಪದ್ಯದ ಸಾರಾಂಶ (ಪಂಪಭಾರತಂ ಗದ್ಯಾನುವಾದ -ಎನ್. ಅನಂತರಂಗಾಚಾರ್)

ವ|| ಎಂಬೆನ್ನಗಮೆಯ್ದೆ ವಂದ ಪಿತೃದ್ವಂದ್ವ ಚರಣಕ್ಕೆ ವಿನಯವಿನಮಿತೋತ್ತಮಾಂಗ
ನಾದನರ್ವರುಂಪರಸಿತಡವರಿಸಿಯುಂ ತೆಬ್ಬರಿಸಿಯುಮಳ್ಕಿರೊಳಪ್ಪಿಕೊಂಡಮೃತವರ್ಷಿ ಕರ
ಪರಿಷೇಕದಿಂದೆ ಪುತ್ರಸ್ಪರ್ಷನಮಾಪ್ಯಾಯನಕೋಟಿಯಾಗೆ ಪುಳಕಿತ ಗಾತ್ರರುಮಾನಂದ ಬಾಷ್ಪವಾರಿ
ಧಾರಾಪರಿಕಲಿತನೇತ್ರರುಮಾಗಿ ಕಿರಿದಾನುಂ ಬೇಗಮಿರ್ದಲ್ಲಿ ಕಾರ್ಯವ್ಯಗ್ರ ಪಾಪಿಪಾಶಾಶ್ರಿತರೆಲ್ಲರುಂ
ಕೇಳಲೆಂದು ಮಹೀಭುಜನಿಂತೆಂದಂ -

ಎನ್ನುವಷ್ಟರಲ್ಲಿ ಸಮೀಪಕ್ಕೆ ಬಂದ ತಂದೆತಾಯಿಗಳ ಚರಣಕ್ಕೆ (ಪಾದಕ್ಕೆ ) ವಿನಯದಿಂದ ತಲೆಬಗ್ಗಿಸಿ ನಮಸ್ಕರಿಸಿದ(ದುರ್ಯೋಧನನು ತನ್ನ ತಂದೆತಾಯಿಗಳಾದ ಧೃತರಾಷ್ಟ್ರ ಗಾಂಧಾರಿಯರಿಗೆ ) ದುರ್ಯೋಧನನನ್ನು ಇಬ್ಬರೂ ಹರಸಿದರು .ಮೈಯನ್ನು ಮುಟ್ಟಿ ನೋಡಿ ಯೂ ,ಸಮಾಧಾನ ಮಾಡಿಯೂ ಪ್ರೀತಿಯಿಂದ ಮಗನನ್ನು ಆಲಂಗಿಸಿದ ಅವರಿಗೆ ಅಮೃತವನ್ನು ಸುರಿಸುವ ಅಭಿಷೇಕಕ್ಕಿಂತ ಮಗನ ಸ್ಪರ್ಷವು ಅತಿಯಾದ ಆನಂದವನ್ನು ಉಂಟುಮಾಡಿತು .ರೋಮಾಂಚಿತವಾದ ಶರೀರವುಳ್ಳವರೂ ಸಂತೋಷದ , ಕಣ್ಣೀರಿನ ಪ್ರವಾಹದಿಂದ ತುಂಬಿದ ಕಣ್ಣುಳ್ಳವರೂ ಆದ ಅವರು ಸ್ವಲ್ಪ ಕಾಲ ಮೌನವಾಗಿದ್ದು ,ಮುಂದಿನ ಕಾರ್ಯದಲ್ಲಿ ಆಸಕ್ತನಾದ ಪಾಪಿ ದುರ್ಯೋಧನನ ಪಾಶಕ್ಕೆ ಒಳಗಾದವರೆಲ್ಲರೂ ಕೇಳಲೆಂದು ಧೃತರಾಷ್ಟ್ರನು ಹೀಗೆಂದನು .

ಮ || ಎನಗಂ ಪಾಂಡುಗಮಿಲ್ಲ ಭೇದಮಿಳೆಯಂ ಪಚ್ಚಾಳ್ವಮಾ ಪಾಂಡುನಂದನಂ
ದನರುಂ ಸೈದರೆ ನಿನ್ನೊಳೀ ಕಲಹಮುಂ ನಿನ್ನಿಂದಮಾಯ್ತೆಂದೊಡಿಂ |
ಮುನಿವೈ ಗಂಗೆಯ ಪೆರ್ಮಗಂಗೆ ಘಟಸಂಭೂತಂಗೆ ಕರ್ಣಾಂಗಸಾ
ಧ್ಯನೊಳಾ ಗಾಂಡಿವಿಯೊಳ್ ಕರುತ್ತಿರಿವರಾರಿಂ ಮಾಡುವಂ ಸಂಧಿಯುಂ ||

ನನಗೂ ಪಾಂಡುವಿಗೂ ಭೇದವಿಲ್ಲ ; ಈ ಭೂಮಿಯನ್ನು (ರಾಜ್ಯವನ್ನು) ಭಾಗ ಮಾಡಿಕೊಂಡು ಆಳೋಣ.ಆ ಪಾಂಡುವಿನ ಮಕ್ಕಳು (ಪಾಂಡವರು)ನಿನ್ನೊಂದಿಗೆ ಹೊಂದಾಣಿಕೆಯಿಂದ ನಡೆದುಕೊಳ್ಳುವವರೇ ಆಗಿದ್ದಾರೆ.ನಿನ್ನಿಂದಲೇ ಈ ಕಲಹವು ಸಂಭವಿಸಿತು ಎಂದರೆ ನೀನು ಇನ್ನೂ ಕೋಪಿಸಿಕೊಳ್ಳುತ್ತೀಯೆ.ಭೀಷ್ಮ,ದ್ರೋಣ, ಕರ್ಣರಿಗೂ ಅಸಾಧ್ಯವಾದ (ಸೋಲಿಸಲು ಸಾಧ್ಯವಿಲ್ಲದ) ಆ ಅರ್ಜುನ(ಗಾಂಡೀವಿ) ನೊಂದಿಗೆ ಕೋಪದಿಂದ ಯುದ್ಧ ಮಾಡುವವರು ಯಾರಿದ್ದಾರೆ ?ಆದ್ದರಿಂದ ಅವರೊಂದಿಗೆ (ಪಾಂಡವರೊಂದಿಗೆ ) ಸಂಧಿ ಮಾಡಿಕೊಳ್ಳುವುದೇ ಉಚಿತವಾದುದುಎಂದು ಧೃತರಾಷ್ಟ್ರನು ದುರ್ಯೋಧನನಿಗೆ ಹೇಳಿದನು.

ಹರಿಣಿ || ಪಗೆಗೆ ಕಣಿಯೊಂದುಂಟೇ ನಣ್ಪಿಂಗಾಮಾಗರಮುಂಟೆ ನೀಂ
ಬಗೆಯೆ ಪಗೆಯುಂ ನಣ್ಪುಂ ಕಯ್ಕೊಂಡ ಕಜ್ಜದಿನಲ್ತೆ ಪು |
ಟ್ಟುಗುಮರಸುಗಳ್ಗೆಂದೀ ಸಂದರ್ಥಶಾಸ್ರದೊಳೇಕೆ ಪೇಳ್
ಮಗನೆ ನೆಗಳ್ದೈ ಕಾರ್ಯಂ ಮಿತ್ರಾದಿ ಕಾರಕಮೆಂಬುದಂ ||

ಹಗೆತನಕ್ಕೆ ಒಂದು ಗಣಿಯಿದೆಯೆ ? ಸ್ನೇಹಕ್ಕೆ ಒಂದು ಮನೆಯಿದೆಯೆ ?ನೀನೇ ಆಲೋಚಿಸು .ಅರಸರಿಗೆ ಶತ್ರುತ್ವ ಮತ್ತು ಮಿತ್ರತ್ವಗಳೆರಡೂ ಅವರು ಕೈಗೊಳ್ಳುವ ಕಾರ್ಯದಿಂದಲ್ಲವೇ ಹುಟ್ಟುವುದು ಎಂದು ರಾಜರಿಗೆ ಯೋಗ್ಯವಾದ ಅರ್ಥಶಾಸ್ರ್ತದಲ್ಲಿ ಹೇಳಿಲ್ಲವೇ?ಅರ್ಥಶಾಸ್ತ್ರದಲ್ಲಿ ಹೇಳಿರುವ ''ಕೈಗೊಂಡ ಕಾರ್ಯವೇ

ಸ್ನೇಹದ್ವೇಷಗಳಿಗೆ ಕಾರಣ''ವೆಂಬ ನೀತಿ ವಾಕ್ಯದಂತೆ ನೀನೇಕೆ ಮಾಡುವುದಿಲ್ಲ ? ಎಂದು ಧೃತರಾಷ್ಟ್ರನು ಮಗನಿಗೆ ಬುದ್ಧಿವಾದ ಹೇಳಿದನು .

ಕಂ || ನೀನುಳ್ಳೊಡೆಲ್ಲರೊಳರೆಮ
ಗೇನುಮಳಲ್ ಮನದೊಳಿಲ್ಲದೆಂತೆನೆ ಮಗನೇ |
ಭಾನುವೆ ಸಾಲದೆ ಪಗಲೆನಿ
ತಾನುಂ ದೀವಿಗೆಗಳುರಿದೊಡೇಂ ನಂದಿದೊಡೇಂ ||

ನೀನಿದ್ದರೆ ಎಲ್ಲರೂ ಇದ್ದ ಹಾಗೆ .ಮಗನೆ ನೀನೊಬ್ಬನುಳಿದರೆ ನಮಗೆ ಮನದಲ್ಲಿ ಯಾವ ಚಿಂತೆಯೂ ಇಲ್ಲ .ಅದು ಹೇಗೆಂದರೆ ಸೂರ್ಯನೊಬ್ಬನೇ ಸಾಲದೇ ?ಹಗಲಿನಲ್ಲಿ ಎಷ್ಟು ದೀವಿಗೆಗಳು ಉರಿದರೇನು ? ಆರಿದರೇನು ? (ಹಗಲಿನಲ್ಲಿ ಎಷ್ಟು ದೀವಿಗೆಗಳು ಉರಿದರೂ ಸೂರ್ಯನ ಮಹತ್ವ ಅವುಗಳಿಗೆ ದೊರೆಯುವುದಿಲ್ಲ .ಸೂರ್ಯನ ಪ್ರಭೆಯ ಮುಂದೆ ದೀವಿಗೆಳ ಬೆಳಕು ಕಂದಿ ಹೋಗುತ್ತದೆ .ಅಷ್ಟು ಪ್ರಾಮುಖ್ಯತೆ ಪಡೆಯುವುದಿಲ್ಲ . ಹಾಗೆಯೇ ದುರ್ಯೋಧನನೊಬ್ಬನು ಉಳಿದರೆ ಅವನ ತಂದೆ ತಾಯಿಗಳಿಗೆ ಉಳಿದ ಮಕ್ಕಳನ್ನು ಕಳೆದುಕೊಂಡ ದುಃಖ ಅಷ್ಟಾಗಿ ಕಾಡಲಾರದೇನೋ)

ವ|| ಅದಲ್ಲದೆಯುಂ ಪಾಂಡವರಪ್ಪೊಡೆನಗೆ ಪಾಂಡುರಾಜಂಗೆ ಬೆಸಕೈಯ್ದುದೆನೆ ಬೆಸಕೈವರೆಂದುದಂ
ಮೀರುವವರಲ್ಲರವರನಾನೆಂತುಮೊಡಂಬಡಿಸಿ ನೀನೆಂದುದನೆನಿಸುವೆನಿದರ್ಕೆ ಮಾರ್ಕೊಳ್ಳದೊಡಂಬಡು
ನಿನ್ನಂ ಕಯ್ಯನೊಡ್ಡಿ ಬೇಡಿದಪ್ಪೆನೆಂದ ಧೃತರಾಷ್ಟ್ರನ ನುಡಿಗನುಬಲಮಾಗಿ ಗಾಂಧಾರಿಯಿಂತೆಂದಳ್ -

ಅದಲ್ಲದೆಯೂ ಪಾಂಡವರಾದರೊ ನನ್ನೊಡನೆ ಪಾಂಡುರಾಜನೊಂದಿಗೆ ಹೇಗೆ ವಿಧೇಯರಾಗಿದ್ದರೋ ಅಷ್ಟೇ ವಿಧೆಯರಾಗಿದ್ದಾರೆ.ಅವನೊಂದಿಗೆ ಹೇಗೆ ನಡೆದುಕೊಳ್ಳುತ್ತಿದ್ದರೋ ಹಾಗೆಯೇ ನಡೆದುಕೊಳ್ಳುವವರು .ನಾನು ಹೇಳಿದುದನ್ನು ಅವರು ಮೀರುವುದಿಲ್ಲ .ಅವರನ್ನು ನಾನು ಹೇಗಾದರೂ ಒಪ್ಪಿಸಿ ನೀನು ಹೇಳಿದುದಕ್ಕೆ ಒಪ್ಪಿಕೊಳ್ಳುವ ಹಾಗೆ ಮಾಡುವೆನು .ಇದಕ್ಕೆ ನೀನು ಪ್ರತಿಯಾಡದೆ ಒಪ್ಪಿಕೊ .ನಿನ್ನನ್ನು ಕೈಯೊಡ್ಡಿ ಬೇಡಿಕೊಳ್ಳುವೆನು ಎಂದು ಧೃತರಾಷ್ಟ್ರನು ದುರ್ಯೋಧನನಿಗೆ ಹೇಳಿದಾಗ ಅವನ ಮಾತನ್ನು ಬೆಂಬಲವಾಗಿ (ಅನುಮೋದಿಸಿ ) ಗಾಂಧಾರಿಯು ಹೀಗೆ ಹೇಳಿದಳು .

ಚಂ || ಕುರುಕುಳನಂದನಂ ಪವನನಂದನನೆಂಬ ಮದಾಂಧಗಂಧಸಿಂ
ಧುರಮ ಕರುತ್ತು ಪಾಯೆ ಪಡಲಿಟ್ಟವೊಲಾದುದು ಪುಣ್ಯದೊಂದು ಪೆ |
ರ್ಮರನುಳಿವಂತೆ ನೀನುಳಿದೆಯಿನ್ನಿರಿವನ್ನರುಮಿಲ್ಲ ಮುತ್ತರುಂ
ಕುರುಡರುಮೆನ್ನದೆಮ್ಮ ನುಡಿಗೇಳ್ ಮಗನೇ ಬಗೆ ತಂದೆಗಿಂಬುಕೆಯ್ ||

ಕುರುಕುಲವೆನ್ನುವ ನಂದನವನವು ಪವನನಂದನನೆಂಬ (ಭೀಮ)ಮದದಿಂದ ಅಂಧನಾದ ಆನೆಯ ಕೋಪದ ದಾಳಿಗೆ ತುತ್ತಾಗಿ ಧ್ವಂಸವಾಯಿತು .ಪುಣ್ಯದಿಂದ ಒಂದು ದೊಡ್ಡ ಮರವು ಉಳಿವ ಹಾಗೆ ನೀನೊಬ್ಬನು ನಮ್ಮ ಪಾಲಿಗೆ ಉಳಿದಿದ್ದೀಯೆ.ಇನ್ನು ಯುದ್ಧ ಮಾಡಿವವರು ಯಾರೂ ಇಲ್ಲ .ಮುದುಕರು ,ಕುರುಡರು ಎನ್ನದೆ ನಮ್ಮ ಮಾತನ್ನು ಕೇಳು ಮಗನೆ .ತಂದೆಯ ಮಾತನ್ನು ಒಪ್ಪಿಕೋ. ಎಂದು ಗಾಂಧಾರಿಯು ದುರ್ಯೋಧನನಿಗೆ ಹೇಳಿದಳು .